
# ನಿಜವಾದ ಶಕ್ತಿ

ಸ್ವಾಮಿ ರಾಘವೇಶಾನಂದ



**ಭೀ**ಮ ಸೌಗಂಧಿಕಾ ಪುಷ್ಪವನ್ನು ತರಲು ಹೋಗುತ್ತಿದ್ದಾಗ ಆಕಸ್ಮಿಕವಾಗಿ ಹನುಮಂತನ ದರ್ಶನವಾಯಿತು. ಅದನ್ನು ನಂತರ ಕೇಳಿದ ಅರ್ಜುನನಿಗೆ ತಾನೂ ಒಮ್ಮೆ ಹನುಮಂತನ ಭೇಟಿ ಮಾಡಬೇಕೆಂಬ ಆಸೆ ಉತ್ಕಟವಾಯಿತು. ಅವನ ಮನಸ್ಸಿನಲ್ಲಿ ಆ ಆಸೆ ಹುದುಗಿ, ಆಗಾಗ ಅವನ ಮನಸ್ಸನ್ನು ಕೆರಳಿಸುತ್ತಿತ್ತು. ಮಹಾಭಾರತದ ಯುದ್ಧವೆಲ್ಲಾ ಮುಗಿಯಿತು. ಕೆಲವು ದಿನಗಳಾದ ಮೇಲೆ ಅರ್ಜುನನಿಗೆ ತೀರ್ಥಯಾತ್ರೆ ಹೋಗುವ ಇಚ್ಛೆಯಾಯಿತು. ಸರಿ, ಯುಧಿಷ್ಠಿರನ ಅಪ್ಪಣೆ ಪಡೆದು ಹೊರಟ. ಹನುಮಂತ ಚಿರಂಜೀವಿ. ಆದುದರಿಂದ ಎಲ್ಲಾದರೂ ಒಂದೆಡೆ ಅವನ ದರ್ಶನ ದೊರೆಯಬಹುದೆಂಬ ಆಸೆ ಅವನ ಮನಸ್ಸಿನಲ್ಲಿತ್ತು. ಹಲವಾರು ಸ್ಥಳಗಳನ್ನು ಸುತ್ತಿ, ದಕ್ಷಿಣಭಾರತದ ರಾಮೇಶ್ವರಂ ಕ್ಷೇತ್ರಕ್ಕೆ ಬಂದ. ಭೋರ್ಗರೆಯುವ ಸಮುದ್ರದ ಅಲೆಗಳ ತೀರದಲ್ಲಿ ಬೃಹದಾಕಾರವಾದ ಶಿವನ ಒಂದು ದೇವಾಲಯವಿತ್ತು. ನೂರಾರು ಭಕ್ತರು, ಸಮುದ್ರಸ್ನಾನ ಮಾಡಿ, ದೇವಸ್ಥಾನಕ್ಕೆ ಹೋಗುತ್ತಿದ್ದರು. ಅರ್ಜುನನೂ ಸ್ನಾನಮಾಡಿ, ಭಕ್ತಿಭಾವದಿಂದ ದೇವಸ್ಥಾನಕ್ಕೆ ಹೋಗಿ, ಸೀತಾಮಾತೆ ಸ್ಥಾಪಿಸಿದ್ದ ಶಿವಲಿಂಗಕ್ಕೆ ಪೂಜೆ ಸಲ್ಲಿಸಿ, ದೇವಸ್ಥಾನವನ್ನೆಲ್ಲಾ ಸುತ್ತಿ ಹೊರಕ್ಕೆ ಬರುತ್ತಿದ್ದ. ಅಲ್ಲಿ ಒಂದು ಮೂಲೆಯಲ್ಲಿ ಒಬ್ಬ ಮುದುಕ ಕಣ್ಣುಮುಚ್ಚಿಕೊಂಡು 'ಶ್ರೀರಾಮ, ಶ್ರೀರಾಮ' ಎಂಬ ಮಂತ್ರ ಜಪಿಸುತ್ತಾ ಕುಳಿತಿದ್ದ. ಅದನ್ನು ಕಂಡ ಅರ್ಜುನನಿಗೆ ಸ್ವಲ್ಪ ಅಚ್ಚರಿಯಾಯಿತು, "ಏನಿದು? ಶಿವನ ದೇವಸ್ಥಾನದಲ್ಲಿ 'ಓಂ ನಮಃ ಶಿವಾಯ' ಎಂದು ಜಪಿಸದೆ ಶ್ರೀರಾಮನನ್ನು ನೆನೆಯುತ್ತಿದ್ದಾನಲ್ಲ" ಎಂದುಕೊಂಡ ಅವನು. ಅರ್ಜುನ ಆ ಮುದುಕನ ಮುಖವನ್ನೇ ದಿಟ್ಟಿಸಿ ನೋಡಿದ; ಅವನ ಮುಖದಲ್ಲಿ ಅದ್ಭುತ ಕಳೆಯಿತ್ತು. ದೇವಸ್ಥಾನದ ಹೊರಗೆ ಬಂದು ಈ ಮುದುಕ ಹೊರಬರುವುದನ್ನೇ ಕಾಯುತ್ತಾ ನಿಂತ. ದೇವಸ್ಥಾನದ ಬಾಗಿಲು ಮುಚ್ಚುವ ಸಮಯದವರೆಗೂ ಅವನು ಹೊರಬರಲೇ ಇಲ್ಲ. "ಏನು, ಇವನು ಬೇರೆ ಯಾವುದೋ ಬಾಗಿಲಿನಿಂದ ಹೊರಟು ಹೋದನೇನು?" ಎಂದು ಚಿಂತಿಸಲಾರಂಭಿಸಿದ. ಅಷ್ಟು ಹೊತ್ತಿಗೆ ಮುದುಕ ಅದೇ ಬಾಗಿಲಿನಿಂದ ನಿಧಾನವಾಗಿ ಹೊರಬಂದ.

ಅರ್ಜುನ ತಕ್ಷಣ ಓಡಿಹೋಗಿ ಅವನ ಪಾದಕ್ಕೆರಗಿದ. ಆ ಮುದುಕ "ಯಾರಪ್ಪಾ ನೀನು? ನೋಡಲು ರಾಜಕುಮಾರನಂತಿದ್ದೀಯಲ್ಲಾ?" ಎಂದು ಕೇಳಿದ. ಅರ್ಜುನ ತನ್ನ ಪರಿಚಯ ಹೇಳಿಕೊಂಡ. ಇಬ್ಬರೂ ಸಮುದ್ರದ ತಟದಲ್ಲಿ ನಡೆದಾಡಲಾರಂಭಿಸಿದರು. ಅರ್ಜುನನಿಗೆ ಈ ಮುದುಕ ಯಾರು ಎಂದು ಕಡೆಗೂ ಗೊತ್ತಾಗಲಿಲ್ಲ. ಕೊನೆಗೆ ಮತ್ತೊಮ್ಮೆ ಪಾದಕ್ಕೆರಗಿ, "ಸ್ವಾಮಿ, ತಾವು ಸಾಮಾನ್ಯ ಮನುಷ್ಯರಲ್ಲ. ತಾವು ಆಂಜನೇಯ ಸ್ವಾಮಿ ಎಂದೇ ನನ್ನ ಭಾವನೆ. ಸದಾ ರಾಮನಾಮ ಜಪಿಸುತ್ತಿರುವ ತಾವು ಮತ್ತಾರಾಗಿರಲು ಹೇಗೆ ತಾನೇ ಸಾಧ್ಯ?" ಎಂದ. ಆ ಮುದುಕ ಪ್ರೀತಿಯಿಂದ ಅರ್ಜುನನತ್ತ ನೋಡಿ, ಪರೀಕ್ಷೆ ಇನ್ನು ಸಾಕು ಎಂದುಕೊಂಡು, "ಹೌದು" ಎಂದು ತಲೆಯಾಡಿಸಿದ. ಅರ್ಜುನನ ಆನಂದಕ್ಕೆ ಪಾರವೇ ಇರಲಿಲ್ಲ. ಅವನು ಹೇಳಿದ, "ಸ್ವಾಮಿ, ನಾನು ತಮ್ಮನ್ನು ತಮ್ಮ

ನಿಜಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತೇನೆ." ಹನುಮಂತ ನಗುತ್ತಾ ಕೆಲವು ಕ್ಷಣ ತನ್ನ ನಿಜ ಸ್ವರೂಪವನ್ನು ತೋರಿಸಿ ಮತ್ತೆ ಮುದುಕನ ವೇಷವನ್ನು ತಾಳಿದ. ಇಬ್ಬರ ಮಾತುಕತೆ ಮುಂದುವರೆಯಿತು. ಒಬ್ಬ ಶ್ರೀರಾಮನ ಪ್ರಿಯಭಕ್ತನಾಗಿದ್ದರೆ ಮತ್ತೊಬ್ಬ ಶ್ರೀಕೃಷ್ಣನ ಪ್ರಿಯ ಭಕ್ತ. "ಸ್ವಾಮಿ, ತಮ್ಮ ಆರಾಧ್ಯದೈವ ಶ್ರೀರಾಮಚಂದ್ರ ದೇವರ ಬಗ್ಗೆ ಒಂದು ಸಂದೇಹ ಇದೆ. ಅದನ್ನು ತಾವೇ ಪರಿಹರಿಸಬೇಕು" ಎಂದು ಅರ್ಜುನ ಕೇಳಿಕೊಂಡ. ಹನುಮಂತ ಅಚ್ಚರಿಯಿಂದ "ಏನದು?" ಎಂದು ಕೇಳಿದ.

ಅರ್ಜುನ ಹೇಳಿದ, "ಏನಿಲ್ಲ, ಶ್ರೀರಾಮನನ್ನು ಕೋದಂಡರಾಮ ಎನ್ನುತ್ತಾರೆ. ಅಂತಹ ಮಹಾವೀರ, ಈ ರಾಮೇಶ್ವರದಿಂದ ಶ್ರೀಲಂಕೆಗೆ ಸೇತುವೆ ಕಟ್ಟಲು ವಾನರ ಸೇನೆಗೆ ಅಷ್ಟೊಂದು ಕಷ್ಟ ಕೊಟ್ಟನಲ್ಲ! ಅದಕ್ಕೆ ಬದಲು ಬಾಣಗಳಿಂದಲೇ ಒಂದು ಭರ್ಜರಿ ಸೇತುವೆ ನಿರ್ಮಾಣ ಮಾಡಬಹುದಿತ್ತಲ್ಲ. ಅಷ್ಟೊಂದು ಸಮಯ, ಶ್ರಮ ತಪ್ಪುತ್ತಿತ್ತಲ್ಲ" ಹನುಮಂತ ತನ್ನ ಪ್ರಿಯ ರಾಮನ ಬಗ್ಗೆ ಆಡಿದ ಮಾತಿನಿಂದ ಸಂತುಷ್ಟನಾಗಲಿಲ್ಲ. ಆದರೂ ಹೇಳಿದ, "ನೀನು ಹೇಳಿದುದೇನೋ ನಿಜ. ಶ್ರೀರಾಮ ಹಾಗೆ ಮಾಡಬಹುದಾಗಿತ್ತು. ಆದರೆ ನಿನಗೆ ನಮ್ಮ ವಾನರರ ಶಕ್ತಿಯ ಪರಿಚಯವಿಲ್ಲ. ಅತ್ಯಂತ ಪರಾಕ್ರಮಿಯಾದ ನಿನ್ನ ಅಣ್ಣ ಭೀಮನಿಗೆ ನನ್ನ ಬಾಲವನ್ನೂ ಕೂಡ ಅಲ್ಲಾಡಿಸಲಾಗಲಿಲ್ಲ. ಅವನು ನಿನಗೆ ಅದನ್ನು ಹೇಳಲಿಲ್ಲವೇ! ಅಂತಹ ಪರಾಕ್ರಮಿಯಾದ ರಾವಣನನ್ನು ನಮ್ಮ ಮಹಾರಾಜರ ಅಣ್ಣ ವಾಲಿ ಬಾಲಕ್ಕೆ ಕಟ್ಟಿಕೊಂಡು ಪ್ರಪಂಚವೆಲ್ಲಾ ಸುತ್ತಿದ." ಅದಕ್ಕೆ ಅರ್ಜುನ ಹೇಳಿದ, "ನನಗೇನೋ ನೀನು ಹೇಳುವುದರಲ್ಲಿ ನಂಬಿಕೆ ಬರುತ್ತಿಲ್ಲ. ನಮ್ಮ ಬಾಣಗಳಿಗೆ ಎಂತಹ ಶಕ್ತಿ ಇವೆ ಎಂಬುದರ ಪರಿಚಯ ನಿಮಗಿಲ್ಲ. ಹೋಗಲಿ, ಇಲ್ಲಿಂದ ತಾನೇ ಶ್ರೀರಾಮ ಸೇತುವೆಯನ್ನು ಕಟ್ಟಿದುದು – ನಾನು ಬೇಕಾದರೆ ಈಗ ನನ್ನ ಬಾಣಗಳಿಂದ ಒಂದು ಸೇತುವೆಯನ್ನು ಕಟ್ಟುವೆನು. ಅದರ ಬಲವನ್ನು ಪರೀಕ್ಷಿಸಿರಿ. ವಾನರರಲ್ಲೆಲ್ಲಾ ಅತ್ಯಂತ ಶಕ್ತಿಯುಳ್ಳವರು ನೀವು ತಾನೇ!" ಹನುಮಂತ ನಗುತ್ತಾ "ಹೂಂ" ಎಂದು ಒಪ್ಪಿಕೊಂಡ. ಅರ್ಜುನ ಅಷ್ಟಕ್ಕೇ ನಿಲ್ಲಿಸಲಿಲ್ಲ, "ನಾನೇನಾದರೂ ಗೆದ್ದರೆ ನನಗೆ ನೀವು ಏನು ತರುವಿರಿ?" ಎಂದು ಪ್ರಶ್ನಿಸಿದ. ಗೆಲ್ಲುವ ಪ್ರಶ್ನೆಯೇ ಇಲ್ಲವೆಂದು ಅರಿತಿದ್ದ ಹನುಮಂತ, "ನೀನು ಏನು ಕೇಳಿದರೆ ಅದನ್ನು ತರುವೆ" ಎಂದ. "ಸೋತರೆ ನಾನು ನಿಮಗೆ ಏನು ತರಬೇಕು?" ಎಂದು ಅರ್ಜುನ ಮತ್ತೆ ಕೇಳಿದ. ಅರ್ಜುನನ ಹುಡುಗುತನಕ್ಕೆ ನಗುತ್ತಾ ಹನುಮಂತ, "ನೀನು ನನಗೆ ಏನನ್ನೂ ಕೊಡಬೇಕಾಗಿಲ್ಲ. ಸೋಲೊಪ್ಪಿಕೊಂಡರೆ ಸಾಕು" ಎಂದ. ಆದರೆ ಅರ್ಜುನ ಅದಕ್ಕೆ ಒಪ್ಪಲಿಲ್ಲ, "ಪಂದ್ಯ ಎಂದ ಮೇಲೆ ಏನಾದರೂ ಪಣ ಎರಡೂ ಕಡೆಯಿಂದ ಇರಬೇಕು. ನಾನೇನಾದರೂ ಸೋತರೆ ಅದು ನನ್ನ ಧನುರ್ವಿದ್ಯೆಗೇ ಅವಮಾನ. ಆದ್ದರಿಂದ ನಾನು ಅಗ್ನಿ ಪ್ರವೇಶ ಮಾಡುವೆ" ಎಂದ. ಹನುಮಂತ ಎಷ್ಟೋ ಬೇಡವೆಂದ. ಆದರೂ ಅರ್ಜುನ ಹಠಹಿಡಿದ.



ಹನುಮಂತ ಅಲ್ಲೇ ಒಂದು ಮೂಲೆಯಲ್ಲಿ ರಾಮನಾಮ ಸ್ಮರಣೆ ಮಾಡುತ್ತಾ ಕುಳಿತ. ಅರ್ಜುನ ಬಿಲ್ಲನ್ನು ಹೆದೆ ಏರಿಸಿ ಒಂದಾದ ಮೇಲೆ ಒಂದು ಬಾಣವನ್ನು ಬಿಡುತ್ತಾ ಸೇತುವೆಯನ್ನು ನಿರ್ಮಿಸಿದ. ಅದನ್ನು ನೋಡಿ ಅರ್ಜುನನಿಗೇ ಹೆಮ್ಮೆ ಎನಿಸಿತು. ನಂತರ ಹನುಮಂತನ ಬಳಿಗೆ ಬಂದು, "ಸ್ವಾಮಿ, ಸೇತುವೆ ತಯಾರಾಗಿದೆ. ತಾವು ಬಂದು ಪರೀಕ್ಷಿಸಬಹುದು"ಎಂದ. ಹನುಮಂತ ಮುಗುಳ್ನಗುತ್ತಾ ತನ್ನ ಬಾಲವನ್ನು ಬೆಳೆಯುವಂತೆ ಮಾಡಿ ಅದರಿಂದ 'ಫಟ್' ಎಂದು ಸೇತುವೆಯ ಮೇಲೆ

ಬಡಿದ. ಆ ಏಟಿನ ಹೊಡೆತಕ್ಕೆ ಸೇತುವೆ 'ಫಟ, ಫಟ' ಎಂದು ಮುರಿದು ಬಿತ್ತು. ಅಲ್ಲಿ ಸೇತುವೆ ಇದ್ದ ಗುರುತೂ ಇಲ್ಲದ ಹಾಗೆ ಆಗಿಹೋಯಿತು. ಇದರಿಂದ ಅರ್ಜುನನಿಗೆ ಅತ್ಯಂತ ವಿಷಾದವೂ ಅವಮಾನವೂ ಆಯಿತು. ಅವನು ತಲೆ ತಗ್ಗಿಸಿ ಅಗ್ನಿಯನ್ನು ಹೊತ್ತಿಸಲು ತಯಾರಾದ. ಹನುಮಂತ ಅವನನ್ನು ತಡೆದು ಸಮಾಧಾನಪಡಿಸಲು ತುಂಬಾ ಯತ್ನಿಸಿದ. ಆದರೆ ಅರ್ಜುನ ಬದುಕಿ ಜೀವಿಸುವುದರಲ್ಲಿ ಏನೂ ಪ್ರಯೋಜನವಿಲ್ಲ ಎಂದು ತೀರ್ಮಾನಿಸಿದ. ಅಗ್ನಿ ಪ್ರಜ್ವಲಿಸಲು ಆರಂಭಿಸಿತು. ಅರ್ಜುನ ಮೂರು ಬಾರಿ ಪ್ರದಕ್ಷಿಣೆ ಮಾಡಿ ಇನ್ನೇನು ಅಗ್ನಿಪ್ರವೇಶ ಮಾಡುವವನಿದ್ದ. ಆ ಸಮಯಕ್ಕೆ ಅಲ್ಲಿಗೆ ಇನ್ನೊಬ್ಬ ವೃದ್ಧ ಬಂದ. ಅವನು ಅಲ್ಲಿ ಏನು ನಡೆಯುತ್ತಿದೆ ಎಂದು ವಿಚಾರಿಸಿದ. ಅರ್ಜುನ ಎಲ್ಲವನ್ನೂ ವಿವರಿಸಿದ. ಅದಕ್ಕೆ ವೃದ್ಧ "ಪಂದ್ಯ ಎಂದ ಮೇಲೆ ಅದಕ್ಕೆ ತೀರ್ಪು ಹೇಳುವವನೊಬ್ಬನಿರಬೇಕಲ್ಲ! ಇದರಲ್ಲಿ ಮಧ್ಯಸ್ಥಿಕೆ ಮಾಡುವವರು ಯಾರು?" ಎಂದು ಪ್ರಶ್ನಿಸಿದ. "ಮಧ್ಯಸ್ಥಿಕೆಗೆ ಯಾರೂ ಇಲ್ಲ ಎಂದ ಮೇಲೆ ಅದು ಪಂದ್ಯವಾಗಲಾರದು. ನಾನು ತೀರ್ಪುಗಾರನಾಗುತ್ತೇನೆ. ನನ್ನ ಮುಂದೆ ಮತ್ತೆ ಪಂದ್ಯ ನಡೆಯಲಿ" ಎಂದ. ಎಲ್ಲರಿಗೂ ಅದು ಸರಿ ಅನ್ನಿಸಿತು. ಆದರೆ ಹನುಮಂತ ಇದರಿಂದ ಬರಿ ಸಮಯ ನಷ್ಟ ಎಂದು ಭಾವಿಸಿದ. ಅರ್ಜುನ ಈ ಬಾರಿ ಒಂದೊಂದು ಬಾಣವನ್ನು ಬಿಡುವಾಗಲೂ ಶ್ರೀಕೃಷ್ಣನನ್ನು ನೆನಪಿಸಿಕೊಂಡು "ರಕ್ಷಿಸು, ರಕ್ಷಿಸು" ಎಂದು ಪ್ರಾರ್ಥಿಸುತ್ತಾ ಬಾಣ ಬಿಡಲಾರಂಭಿಸಿದ. ಹನುಮಂತನಾದರೋ ತಮಾಷೆ ನೋಡುತ್ತಿರುವವನಂತೆ, ಮತ್ತೆ ಇದನ್ನು ಮುರಿಯುತ್ತೇನೆ ಎಂಬ ಅಹಂಭಾವದಿಂದ ಅರ್ಜುನನನ್ನೇ ಹೀಯಾಳಿಸುವಂತೆ ಅವನತ್ತ ನೋಡುತ್ತಿದ್ದ. ಸೇತುವೆ ಮತ್ತೆ ತಯಾರಾಯಿತು. ಹನುಮಂತ ಅಸಡ್ಡೆಯಿಂದ ಮತ್ತೆ ಬಾಲವನ್ನು ದೊಡ್ಡದು ಮಾಡಿ ಸೇತುವೆಯ ಮೇಲೆ ಬೀಸಿದ. ಸೇತುವೆ ಸ್ವಲ್ಪವೂ ಅಲ್ಲಾಡಲಿಲ್ಲ. ಕೋಪದಿಂದ ಅದರ ಮೇಲೆ ಜಿಗಿದ, ಊಹೂಂ! ಏನೂ ಆಗಲಿಲ್ಲ. ಇತ್ತಿಂದತ್ತ ಓಡಾಡಿದ. ಸೇತುವೆ ಗಟ್ಟಿಯಾಗೇ ಇತ್ತು. ಅನುಮಾನದಿಂದ ಹನುಮಂತ ಆ ಮುದುಕನತ್ತ ನೋಡಿದ. ಅವನು ಹಸನ್ಮುಖಿನಾಗಿ ಹನುಮಂತನನ್ನೇ ನೋಡುತ್ತಿದ್ದ. ಹನುಮಂತನಿಗೆ ಸಂದೇಹ ಬಂದಿತು. ತಕ್ಷಣ ಅವನು ಜಿಗಿದು ಆ ವೃದ್ಧನ ಪಾದಕ್ಕೆರಗಿದ. ನಂತರ ಮೇಲೆದ್ದು, "ಸ್ವಾಮಿ, ತಾವು ಯಾರು ಎಂಬುದನ್ನು ತಿಳಿಸಬೇಕು. ತಾವು ಸಾಮಾನ್ಯ ಮನುಷ್ಯರಲ್ಲ" ಎಂದ. ಕಣ್ಣು ಬಿಟ್ಟು ನೋಡಿದಾಗ, ಆ ವೃದ್ಧನ ಸ್ಥಾನದಲ್ಲಿ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನೇ ನಿಂತಿದ್ದ. ಅರ್ಜುನನ ಆನಂದಕ್ಕೆ ಪಾರವೇ ಇಲ್ಲ. ಇಬ್ಬರೂ ಶ್ರೀಕೃಷ್ಣನಿಗೆ ಭಕ್ತಿಪೂರ್ವಕವಾಗಿ ನಮಿಸಿದರು. ಶ್ರೀಕೃಷ್ಣ ಅವರನ್ನುದ್ದೇಶಿಸಿ ಹೇಳಿದ, "ನೋಡಿ, ನಿಜವಾದ ಶಕ್ತಿ ನಿಮ್ಮಿಬ್ಬರದೂ ಅಲ್ಲ. ಮೊದಲನೆಯ ಬಾರಿ ಅರ್ಜುನ, ನಾನು ನಿರ್ಮಿಸುತ್ತೇನೆ ಎಂಬ ಅಹಂಭಾವದಿಂದ ಸೇತುವೆಯನ್ನು ನಿರ್ಮಿಸಿದ. ಆಗ ಹನುಮಂತ ಶ್ರೀರಾಮನನ್ನು ಸ್ಮರಿಸುತ್ತಾ ದೂರದಲ್ಲಿ ಕುಳಿತಿದ್ದ. ಶ್ರೀರಾಮನ ಶಕ್ತಿಯ ಮುಂದೆ ಆ ಸೇತುವೆ ನಿಲ್ಲಲಿಲ್ಲ. ಹಾಗೆಯೇ ಎರಡನೇ ಬಾರಿ ಹನುಮಂತ ಅಹಂಭಾವದಿಂದ ಅರ್ಜುನನನ್ನು ಅಣಕಿಸುತ್ತಾ ನಿಂತ. ಆದರೆ ಅರ್ಜುನ ನನ್ನ ಸ್ಮರಣೆ ಮಾಡುತ್ತಾ ಬಾಣಗಳನ್ನು ಬಿಟ್ಟ. ನನ್ನ ಶಕ್ತಿಯ ಮುಂದೆ ಹನುಮಂತನ ಆಟ ನಡೆಯಲಿಲ್ಲ. ಆದುದರಿಂದ ತಿಳಿಯಿರಿ, ಕೌರವರನ್ನು ಕೊಂದುದು ನನ್ನ ಶಕ್ತಿಯೇ, ರಾವಣನನ್ನು ಕೊಂದುದು ಕೂಡ ನನ್ನ ಶಕ್ತಿಯೇ ಹೊರತು ವಾನರರದ್ದಲ್ಲ. ಎಲ್ಲದರ ಹಿಂದೆ ಭಗವಂತನ ಶಕ್ತಿ ಇದೆ ಎಂಬುದನ್ನು ಮರೆಯಬಾರದು. ಅವನ ಸ್ಮರಣೆಯಿಂದಲೇ ಎಲ್ಲಾ ಶಕ್ತಿಯೂ ನಮ್ಮಲ್ಲಿ ಬರುವುದು."



ಆದುದರಿಂದ ಮಕ್ಕಳೇ, ಭಗವಂತನ ಸ್ಮರಣೆ ಮಾಡಿ ಯಾವ ಕಾರ್ಯ ಮಾಡಿದರೂ ನಾವು ಅದರಲ್ಲಿ ವಿಜಯಿಗಳಾಗುತ್ತೇವೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ.


# ಮುಗ್ಧ ಭಕ್ತಿ

ಎಸ್. ಆರ್. ಲೀಲಾವತಿ

ಒಂದು ಊರು. ಆ ಊರಿನಲ್ಲಿ ಒಂದು ಚಂದದ ಹೊಳೆ. ಆ ಹೊಳೆಯ ದಡದಲ್ಲಿ ರಾಶಿ ರಾಶಿ ಮರಳು. ಮರಳ ಹಾಸಿನ ತುಂಬ ಕಪ್ಪೆಚಿಪ್ಪು, ಶಂಖ ಇತ್ಯಾದಿ ಇತ್ಯಾದಿ. ಸಂಜೆಯಾಯಿತೆಂದರೆ ಮಕ್ಕಳ ಸಮೂಹವನ್ನೇ ಆ ಮರಳ ದಂಡೆಯ ಮೇಲೆ ನೋಡಬಹುದಿತ್ತು. ಕಪ್ಪೆಗೂಡು ಕಟ್ಟುವ ಆಟ, ಓಡುವ ಆಟ ಎಲ್ಲ ನಡೆಯುತ್ತಿತ್ತು. ಅದರ ಜೊತೆಗೆ ಬೆಳಗ್ಗೆ, ಸಂಜೆ ಒಂದು ಗುಂಪು ಸಂಧ್ಯಾವಂದನೆಯನ್ನು ಮಾಡಲು ನದೀ ತೀರಕ್ಕೆ ದಿನವೂ ಬರುತ್ತಿತ್ತು. ಒಬ್ಬಳು ಹಣ್ಣು ಹಣ್ಣು ಮುದುಕಿ ಕೂಡ ಕೋಲೂರಿಕೊಂಡು ನಿಧಾನವಾಗಿ ನಡೆದು ಬಂದು ಅಲ್ಲಿ ಮರಳ ದಂಡೆಯ ಮೇಲೆ ಒಂದು ಗಂಟೆ, ಎರಡು ಗಂಟೆ ಕೂರುತ್ತಿದ್ದಳು. ಅವಳಿಗೆ ಕಣ್ಣು ಅಷ್ಟು ಸರಿಯಾಗಿ ಕಾಣಿಸುತ್ತಿರಲಿಲ್ಲ, ಮಂಜುಗಣ್ಣು. ಅವಳಿಗೆ ಆ ನದಿಯನ್ನು ಕಂಡರೆ ಬಹಳ ಪ್ರೀತಿ. ಅದಕ್ಕೇ ಪ್ರತಿ ದಿನಾ ಸಂಜೆ ಅಲ್ಲಿಗೆ ಬರುತ್ತಿದ್ದಳು. ದಿನವೂ ಬಂದು ಸಂಧ್ಯಾವಂದನೆ ಮಾಡುತ್ತಿದ್ದ ಆ ಗುಂಪನ್ನು ನಿತ್ಯವೂ ನೋಡುತ್ತಿದ್ದಳು. ಅವರೆಲ್ಲರೂ ಒಂದು ಸಲ ಬಾಯಿಗೆ ಏನನ್ನೋ ಹಾಕಿಕೊಳ್ಳುತ್ತಿದ್ದರು, ಇನ್ನೊಂದು ಸಲ ನೆಲಕ್ಕೆ ಮತ್ತೇನನ್ನೋ ಬಿಡುತ್ತಿದ್ದರು. ಅದೇನೆಂದು ಅವಳಿಗೆ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಅವರು ಬಾಯಿಗೆ ಹಾಕಿಕೊಳ್ಳುತ್ತಿದುದು ತೀರ್ಥವನ್ನು, ಅಂದರೆ ಸಂಧ್ಯಾವಂದನೆಯ ಕ್ರಮದಲ್ಲಿ ಆಪೋಶನವನ್ನು ಮಾಡುತ್ತಿದ್ದರು. ಮತ್ತೊಂದು ಸಲ ನೀರನ್ನು ಕೆಳಗೆ ಬಿಡುತ್ತಿದ್ದರು – ಈ ಪದ್ಧತಿಯ ಪ್ರಕಾರ ಸಂಧ್ಯಾವಂದನೆ ಮಾಡುತ್ತಿದ್ದರು. ಅವರೆಲ್ಲ ಸೇರಿ ಏನು ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಕುತೂಹಲ ಆ ಮುದುಕಿಗೆ.

ಒಂದು ದಿನ ಆ ಜನರು ಸಂಧ್ಯಾವಂದನೆ ಮುಗಿಸಿ ಮನೆಕಡೆಗೆ ಹೊರಟಾಗ ಮುದುಕಿಯ ಪಕ್ಕದಲ್ಲೆ ಹಾದು ಹೋದರು. ಹಾಗೆ ಹೋಗುತ್ತಿದ್ದಾಗ ಮುದುಕಿ ಗಟ್ಟಿಯಾಗಿ "ಸ್ವಾಮಿ, ಅಯ್ಯಾ, ನೋಡಿ" ಅಂತ ಕರೆದಳು. ಅವರೆಲ್ಲ ಇವಳ ಕಡೆ ತಿರುಗಿ "ಏನಮ್ಮ, ಅಜ್ಜಿ?" ಎಂದು ಕೇಳಿದರು. "ಸ್ವಾಮಿ, ದಿನವೂ ನಾನು ನಿಮ್ಮನ್ನು ನೋಡ್ತಿದ್ದೀನಿ. ನೀವೆಲ್ಲ ಒಂದು ಸಾರಿ ಏನೋ ಬಾಯಿಗೆ ಹಾಕ್ಕೊಳ್ತೀರಿ. ಒಂದು ಸಾರಿ ನೆಲಕ್ಕೆ ಹಾಕ್ತೀರಿ. ಏನು ತಿಂತೀರಿ ಸ್ವಾಮಿ?" ಎಂದು ಮುಗ್ಧವಾಗಿ ಅವರನ್ನು ಪ್ರಶ್ನಿಸಿದಳು.

ಆ ಗುಂಪಿನಲ್ಲಿದ್ದ ಕುಹಕ ಬುದ್ಧಿಯವನೊಬ್ಬ ಕೂಡಲೇ ಹೇಳಿದ: "ಅದಾ ಅಜ್ಜೀ, ನಾವು ದಿನಾ ರವೆ ಉಂಡೆ ಮಾಡಿಕೊಂಡು ಬರ್ತೀವಿ. ನಾವು ಬಂದ ಕೂಡಲೆ ಬಾಲ ಕೃಷ್ಣ ನಮ್ಮೆದುರಿಗೆ ಬಂದು ಬಿಡ್ತಾನೆ. ನಾವು ಅವನಿಗೊಂದು ರವೆ ಉಂಡೆ ತಿನ್ನಲು ಕೊಡ್ತೀವಿ. ನಾವೊಂದು ತಿಂತೀವಿ" ಅಂತ ಆ ಮಂಜುಗಣ್ಣಿನ ಮುದುಕಿಗೆ ಹೇಳಿ ನಗುನಗುತ್ತ ಮುಂದೆ ಹೋಗುತ್ತಾನೆ. ಅವನ ಜೊತೆಯವರೂ,




ಏನೂ ಹೇಳದೆ ಅವನನ್ನೇ ಹಿಂಬಾಲಿಸಿದರು. ಹೋಗ್ತಾ ಹೋಗ್ತಾ, "ನೀನೂ ನಮ್ಮ ಹಾಂಗೆ ಮಾಡು, ನಿಂಗೂ ಕೃಷ್ಣ ಕಾಣಿಸ್ತಾನೆ" ಎಂದ. ಆ ಮುದುಕಿ "ಎಂಥಾ ಪುಣ್ಯಾತ್ಮರಪ್ಪಾ ನೀವೆಲ್ಲಾ" ಎಂದು ಕೈಮುಗಿದಳು, "ಅವರು ಹೇಳಿದ ಹಾಗೆ ನಾನೂ ಮಾಡಿದರೆ ನಂಗೂ ಕೃಷ್ಣ ಕಾಣಿಸ್ತಾನಂತೆ" ಅನ್ನುವ ಸಂತೋಷದಲ್ಲಿ ಮನೆಗೆ ಹೋದಳು.

ಮಾರನೆಯ ದಿನ ಆ ಮುದುಕಿ ಮನೆಯಲ್ಲಿ ರವೆ ಉಂಡೆಯನ್ನು ಮಾಡುತ್ತಾಳೆ. "ಕೃಷ್ಣಾ, ಇವತ್ತು ನನ್ನ ಹತ್ತಿರಾನೂ ಬಾರಪ್ಪ" ಎಂದು ಹೇಳುತ್ತಾ ತನ್ನ ಸೆರಗಿನ ತುಂಬಾ ರವೆ ಉಂಡೆಯನ್ನು ಕಟ್ಟಿಕೊಂಡು ನದೀ ದಡಕ್ಕೆ ಬರುತ್ತಾಳೆ. ದಿನವೂ ಕೂರುತ್ತಿದ್ದ ಜಾಗದಲ್ಲಿ ಕೂರುತ್ತಾಳೆ. ಸೆರಗಿನಲ್ಲಿ ಕಟ್ಟಿಕೊಂಡಿದ್ದ ರವೆ ಉಂಡೆಯನ್ನು ಬಿಚ್ಚಿಟ್ಟುಕೊಳ್ಳುತ್ತಾಳೆ. ಅವಳು ಹಾಗೆ ಮಾಡುತ್ತಿದ್ದ ಹಾಗೇ ಅಂಬೆಗಾಲಿನ ಕೃಷ್ಣ ಅವಳ ಕಣ್ಣ ಮುಂದೆ ಬಂದು ಬಾಯಿ ತೆರೆದು ನಗುತ್ತಾನೆ. ಮುದುಕಿಗೆ ಸಂತೋಷವೋ ಸಂತೋಷ. ಬಾಲಕೃಷ್ಣನ ಬಾಯಿಗೆ ಒಂದು ರವೆ ಉಂಡೆಯನ್ನು ಹಾಕುತ್ತಾಳೆ, ತನ್ನ ಬಾಯಿಗೆ ಒಂದು ಹಾಕಿಕೊಳ್ಳುತ್ತಾಳೆ. ಹೀಗೇ ಒಂದು ಕೃಷ್ಣನಿಗೆ, ಒಂದು ತನಗೆ ಅಂತ, ರವೆ ಉಂಡೆ ತಿನ್ನಿಸೋದು, ತಾನೂ ತಿನ್ನೋದು ಮಾಡುತ್ತಾಳೆ.

ಅಷ್ಟರಲ್ಲಿ ಸಂಧ್ಯಾವಂದನೆ ಮಾಡಿ ಮುಗಿಸಿದ ಆ ಜನರ ಗುಂಪು ಮನೆಯ ಕಡೆಗೆ ಹೊರಟವರು, ಮುದುಕಿಯ ಕಡೆಗೆ ನೋಡುತ್ತಾರೆ. ಅವಳು ಏನೋ ಒಂದನ್ನು ಎದುರಿಗೆ, ಒಂದನ್ನು ತನ್ನ ಬಾಯಿಗೆ ಹಾಕಿಕೊಳ್ಳುತ್ತಾ ಇರುತ್ತಾಳೆ. ಅವರು ಹತ್ತಿರ ಬಂದು ನೋಡುತ್ತಾರೆ. ಅದು ರವೆ ಉಂಡೆ. "ಏನು ಮಾಡ್ತಿದೀಯಾ? ಅಜ್ಜೀ" ಅಂತ ಕೇಳುತ್ತಾರೆ. "ನೀವು ಹೇಳಿದ ಹಾಗೆ ಮಾಡ್ತಿದ್ದೀನಿ, ಸ್ವಾಮಿ. ನನ್ನ ಎದುರಿಗೆ ನೋಡಿ, ಬಾಲಕೃಷ್ಣ ಇದಾನೆ, ಅಂಬೆಗಾಲಿನ ಕೃಷ್ಣ. ಅವನಿಗೊಂದು ರವೆ ಉಂಡೆ ಕೊಟ್ಟು, ನಾನೊಂದು ತಿನ್ನುತ್ತಿದ್ದೀನಿ" ಎನ್ನುತ್ತಾಳೆ.

ಅವರೆಲ್ಲಾ ಕಣ್ಣರಳಿಸಿ ನೋಡುತ್ತಾರೆ. ಅವಳು "ಕೃಷ್ಣಪ್ಪ, ತಗೋ ನನ್ನಪ್ಪ" ಅಂತ ಎದುರಿಗೆ ರವೆ ಉಂಡೆ ಕೊಡುತ್ತಾಳೆ. ಅದು ಮಾಯವಾಗಿ ಬಿಡುತ್ತದೆ. ಎದುರಿಗೆ ಹಾರಿದ ರವೆ ಉಂಡೆಯೆಲ್ಲಾ ಹಾಗೆ ಮಂಗಮಾಯವಾಗುತ್ತದೆ. ಆಗ ಸಂಧ್ಯಾವಂದನೆ ಮಾಡುತ್ತಿದ್ದ ಮಂದಿಗೆ "ಅಲ್ಲಿ ನಿಜವಾಗಿ ಬಾಲಕೃಷ್ಣ ಇದ್ದಾನೆ, ನಮ್ಮ ಕಣ್ಣಿಗೆ ಕಾಣುತ್ತಿಲ್ಲ" ಎಂಬ ಸತ್ಯದ ಅರಿವಾಗುತ್ತದೆ. ಮುದುಕಿಯ ಮುಗ್ಧ ಭಕ್ತಿಗೆ ಮಾರುಹೋಗಿ, "ಅಜ್ಜೀ, ನೀನೇ ಪುಣ್ಯವಂತಳು. ಬಾಲಕೃಷ್ಣನ ದರ್ಶನವನ್ನು ಮಾಡಿದ್ದೀಯಾ. ನಾವು ಹಾಸ್ಯಕ್ಕೆಂದು ಹೇಳಿದ ಮಾತನ್ನೇ ನೀನು ನಂಬಿ ಅದರಂತೆಯೇ ನಡೆದೆ. ನಿನ್ನ ನಂಬಿಕೆಯಿಂದಲೇ ನಿನಗೆ ದೈವಸಾಕ್ಷಾತ್ಕಾರವಾಯಿತು" ಎಂದು ಹೇಳುತ್ತ ಆ ಮುಗ್ಧಜೀವಕ್ಕೆ ಎಲ್ಲರೂ ಅಡ್ಡಬಿದ್ದು ನಮಸ್ಕರಿಸುತ್ತಾರೆ.

ಮಕ್ಕಳೇ, ದೇವರಿಗೆ ಇಷ್ಟ ಆಗೋದು,
ನಮ್ಮ ಭಕ್ತಿಯೇ ಹೊರತು, ಆಡಂಬರ ಅಲ್ಲ!



# ರಾಜನೆಂದರೆ ಇವನೇ ಸರಿ


ಕೊಕ್ಕಡ ವೆಂಕಟ್ರಮಣ ಭಟ್

**ಹೆ**ಸರೇಕೆ, ಊರೇಕೆ, ರಾಜ್ಯವೇಕೆ, ಅವನೊಬ್ಬ ರಾಜ. "ನಾನು ರಾಜನಾಗಿರುವಾಗ ಈ ರಾಜ್ಯದಲ್ಲಿ ನರಬಲಿ ಕೂಡದು" ಎಂದು ಇಂದ್ರನಿಗೇ ತಿರುಗೇಟು ನೀಡುವಂತೆ ಆಜ್ಞೆ ಹೊರಡಿಸಿದ ಧೀಮಂತ ರಾಜ ಅವನು.

ದೇವೇಂದ್ರನೇನು ಸುಲಭಕ್ಕೆ ತೆಪ್ಪಗಿದ್ದಾನೆಯೇ? "ನಾಳೆ ಸೂರ್ಯಾಸ್ತ ಸಮಯದೊಳಗೆ ಊರ ಹೊರಗಿರುವ ಬಲಿಪೀಠದಲ್ಲಿ ನನಗೆ ನರಬಲಿ ಸಲ್ಲಲೇಬೇಕು. ಸಂದೇ ಸಲ್ಲುತ್ತದೆ. ಬಲಿಪೀಠದ ಬಳಿ ಮನುಷ್ಯನೊಬ್ಬ ನಿಲ್ಲಬೇಕು. ಬಲಿಗೆ ಸಿದ್ಧನಾದ ಮನುಷ್ಯನ ತಲೆಯ ಮೇಲೆ ಭೀಮಗಾತ್ರದ ಬಂಡೆಯೊಂದು ಎರಗುತ್ತದೆ. ನರಬಲಿ ನಡೆದೇ ನಡೆಯುತ್ತದೆ, ನಡೆಯಲೇಬೇಕು. ಬಲಿಪೀಠದ ಬಳಿ ಮನುಷ್ಯನೊಬ್ಬನನ್ನು ನಿಲ್ಲಿಸದೇ ಹೋದೀರಿ, ಜೋಕೆ! ಪರಿಣಾಮ ಊರಿನಲ್ಲಿರುವ ಪ್ರತಿಯೊಬ್ಬ ಮನುಷ್ಯನ ತಲೆಯ ಮೇಲೂ ಬಂಡೆಗಳು ಬಂದು ಅಪ್ಪಳಿಸುತ್ತವೆ! ಊರಿನ ಜನರೆಲ್ಲ ಸಾವನ್ನಪ್ಪಬೇಕಾಗುತ್ತದೆ, ಹುಷಾರ್!" ಎಂದು ಬೆದರಿಕೆ ಹಾಕಿ ದೇವೇಂದ್ರ ಅದೃಶ್ಯನಾದನು.

ಊರಿನ ಜನರಿಗೆ ದಿಗಿಲೆನ್ನಿಸಿತು. ರಾಜನು ನರಬಲಿ ಕೂಡದು ಎಂದು ರಾಜಾಜ್ಞೆ ಹೊರಡಿಸಿದ್ದಾನೆ. ನರಬಲಿ ನಡೆಯದೇ ಹೋದರೆ ರಾಜ್ಯಕ್ಕೇ ಕಂಟಕ ಎದುರಾಗಲಿದೆ! ರಾಜ ಮನಸ್ಸು ಸಡಿಲಿಸಲಿಲ್ಲ. ಕೊನೆಗೆ ಊರಿನ ಪ್ರಮುಖರು, ಹಿರಿಯರು ಸಮಾಲೋಚನೆ ನಡೆಸಿದರು. ಹೇಗಾದರೂ ಮಾಡಿ ಒಬ್ಬ ವ್ಯಕ್ತಿಯ ಮನಸ್ಸು ಒಲಿಸುವುದರಲ್ಲಿ ಸಫಲರಾದರು. ಪ್ರಾಣತ್ಯಾಗಕ್ಕೆ ಸಿದ್ಧನಾದ ಆ ಮನುಷ್ಯ ಬಲಿಪೀಠದ ಬಳಿ ನಿಶ್ಚಲವಾಗಿ ನಿಂತನು. ರಾಜನೂ ಎಲ್ಲರೊಡನೆ ನಿಂತು ನೋಡುತ್ತಿದ್ದನು. ಸೂರ್ಯಾಸ್ತ ಸಮಯ ಸಮೀಪಿಸುತ್ತಿದೆ!

ಎಲ್ಲರ ನೋಟ ಆಗಸದತ್ತ. ಹೌದು! ಭೀಮಾಕಾರದ ಬಂಡೆಯೊಂದು ಆಕಾಶದಿಂದ ಉರುಳಿಕೊಂಡು ಬಲಿಪೀಠದೆಡೆಗೆ ನುಗ್ಗುತ್ತಿದೆ. ಬಲಿವೇದಿಕೆಯಲ್ಲಿದ್ದ ಮನುಷ್ಯ ನಿಶ್ಚಲನಾಗಿದ್ದಾನೆ! ರಾಜನಿಗೆ ಎದೆ ಕಂಪಿಸುತ್ತದೆ! ಕಣ್ಣುಗಳು ಅದುರುತ್ತಿವೆ! ಪ್ರಜೆಗಳು ಬಲಿದಾನಕ್ಕೆ ಸಿದ್ಧನಾದ ವ್ಯಕ್ತಿಗೆ ಜಯಘೋಷವನ್ನು ಹೇಳುತ್ತಿದ್ದಾರೆ!



ಬಂಡೆ ಅತಿ ಸಮೀಪಕ್ಕೆ ಮುನ್ನುಗ್ಗಿದೆ! ರಾಜನಿಗೆ ಅದೇನು ಆವೇಶ ಬಂತೋ ಏನೋ, ಕುಳಿತಲ್ಲಿಂದ ಧಿಗ್ಗೆಂದು ನೆಗೆದವನೇ ಬಲಿಪೀಠದಲ್ಲಿದ್ದ ಮನುಷ್ಯನನ್ನು ಪಕ್ಕಕ್ಕೆ ತಳ್ಳಿ ಆ ಜಾಗದಲ್ಲಿ ತಾನೇ ನಿಂತನು. ಬಂಡೆ ರಾಜನ ತಲೆಗಪ್ಪಳಿಸಿತು! ಗುಡುಗಿನ ಸಪ್ಪಳ ಮೂಡಿತು! ಮಿಂಚು ಕಣ್ಣು ಕೋರೈಸಿತು! ನೋಡುಗರು ತಮ್ಮ ಕಣ್ಣನ್ನು ತಾವೇ ನಂಬದಾದರು! ರಾಜನ ತಲೆಗೆರಗಿದ ಬಂಡೆ ನುಚ್ಚು ನೂರಾಗಿತ್ತು. ಅದೇನು ಮಹಿಮೆಯೋ! ಆ ಕಲ್ಲಿನ ಚೂರೆಲ್ಲವೂ ಹೂವುಗಳ ಪಕಳೆಗಳಾಗಿ ರಾಜನ ಶರೀರವನ್ನು ಅಲಂಕರಿಸಿದ್ದವು! "ಭಲೆ! ಭಲೆ! ರಾಜನೆಂದರೆ ನೀನೇ ಸರಿ! ದೇವೇಂದ್ರನು ಪ್ರಸನ್ನನಾಗಿ ನಿನ್ನ ರಾಜ್ಯಕ್ಕೆ ಅಳಿವಿಲ್ಲದ ಸಮಸ್ತ ಸಂಪದಗಳನ್ನು ಅನುಗ್ರಹಿಸುತ್ತಾನೆ" ಎಂಬ ಅಶರೀರವಾಣಿ ನಭೋಮಂಡಲದಿಂದ ಕೇಳಿಸಿತು.

ಅಧಿಕಾರವೆಂದರೆ ಬರಿಯ ಸುಖವಲ್ಲ. ಅಧಿಕಾರದಲ್ಲಿರುವವನು ತ್ಯಾಗದಲ್ಲಿಯೂ ಅಗ್ರಗಣ್ಯನಾಗಿರಬೇಕು.

# ಒಂದೇ ಅಂಗಳದ ಹೂವುಗಳು

ಕೆ. ಗಾಯತ್ರಿ ಮಂಜುನಾಥ

**ಒಂ**ದೂರಿನಲ್ಲಿ ವಿಧವೆಯೊಬ್ಬಳಿದ್ದಳು. ಅವಳಿಗೆ ಒಬ್ಬ ಗಂಡು ಮಗ, ಒಬ್ಬಳು ಹೆಣ್ಣು ಮಗಳಿದ್ದಳು. ಆ ಹೆಂಗಸು ಬಹಳ ಕಷ್ಟಪಟ್ಟು ಮಕ್ಕಳನ್ನು ಸಾಕುತ್ತ, ಶಾಲೆಗೆ ಕಳುಹಿಸುತ್ತಿದ್ದಳು. ಮಗಳು ಚೆನ್ನಾಗಿ ಓದುತ್ತಿದ್ದಳು, ಮನೆಗೆಲಸದಲ್ಲೂ ಸಹಾಯ ಮಾಡುತ್ತಿದ್ದಳು. ಮಗನು ದೊಡ್ಡವನು, ಆದರೆ ಅವನು ಉಂಡಾಡಿಯಾಗಿ ಶಾಲೆಗೂ ಸರಿಯಾಗಿ ಹೋಗದೆ ಅಡ್ಡಾಡಿಕೊಂಡಿರುತ್ತಿದ್ದನು. ಅವನು ಗುರುಗಳ ಮಾತನ್ನಾಗಲಿ, ತಾಯಿಯ ಹಿತವಚನವನ್ನಾಗಲಿ ಕೇಳುತ್ತಿರಲಿಲ್ಲ.

ಹೀಗೆಯೆ, ಅವನು ಒಂದು ದಿನ ಒಂದು ಮರದ ಕೆಳಗೆ ಕುಳಿತುಕೊಂಡಿದ್ದನು. ಆ ಮರದ ಬಳಿ ಒಂದು ಮನೆ ಇತ್ತು. ಆ ಮನೆಯ ಅಂಗಳದಲ್ಲಿ ದುಂಡುಮಲ್ಲಿಗೆ ಮತ್ತು ಕನಕಾಂಬರ ಗಿಡಗಳಿದ್ದವು; ತಾಯಿ–ಮಗಳು ಹೂವುಗಳನ್ನು ಕೀಳುತ್ತಿದ್ದರು. ತಾಯಿ ಮಗಳಿಗೆ, "ದುಂಡು ಮಲ್ಲಿಗೆ ಮೊಗ್ಗು ಸ್ವಲ್ಪ ಕೀಳು, ಸ್ವಲ್ಪ ಹಾಗೆಯೇ ಬಿಡು ಮತ್ತು ಕನಕಾಂಬರವನ್ನೂ ಹಾಗೇ ಮಾಡು" ಎಂದು ಹೇಳಿದಳು. ಮಗಳು "ಯಾಕಮ್ಮ ಈ ರೀತಿ?" ಎಂದು ಕೇಳಿದಳು. ಅದಕ್ಕೆ ತಾಯಿ, "ಮಲ್ಲಿಗೆ ಅರಳಿದ ಮೇಲೆ ದೇವರ ಪೂಜೆಗೆ ಬಳಸೋಣ, ಕನಕಾಂಬರ ಹೂವನ್ನು ಹಾಗೇ ಬಿಟ್ಟು ಬೀಜಗಳನ್ನು ಸಂಗ್ರಹಿಸೋಣ" ಎಂದು ಹೇಳಿದಳು.



ನಂತರ ಹುಡುಗಿ, "ಅಮ್ಮಾ, ಅಲ್ಲಿರುವ ಗಿಡದಲ್ಲಿ ಒಂದೇ ಒಂದೂ ಹೂವಿಲ್ಲ, ಏಕಮ್ಮಾ?" ಎಂದು ಕೇಳಿದಳು. ಆಗ ತಾಯಿ ಹೀಗೆ ಹೇಳಿದಳು: "ನೆಲ ಬರಡಾಗಿದೆ, ಎರಡು ವರ್ಷಗಳಿಂದ ಮಳೆಯಿಲ್ಲದೆ ಭೂಮಿಯಲ್ಲಿ ಸಾರ ಕಮ್ಮಿಯಾಗಿದೆ; ಗಿಡ ಬೆಳೆದು ದೊಡ್ಡದಾಗಿದ್ದರೂ ವ್ಯರ್ಥವಾಗಿ ನಿಂತಿದೆ. ಆದುದರಿಂದಲೆ ಈ ವರ್ಷ ಮಳೆ ಬಂದ ಮೇಲೆ ಆ ಗಿಡ ಕಿತ್ತು, ಭೂಮಿ ಹಸನು ಮಾಡಿ, ಸಂಗ್ರಹಿಸಿರುವ ಬೀಜಗಳನ್ನು ಬಿತ್ತೋಣ. ಆಗ ಒಳ್ಳೆಯ ಗಿಡ ಬೆಳೆಯಬಹುದು, ಇದು ಪ್ರಕೃತಿಯ ನಿಯಮ. ಹೂವು ಕೊಡದ ಗಿಡ ಕಸದಂತೆ ಬೆಳೆದು ಗೊಬ್ಬರವಾಗುತ್ತದೆ. ಹೂವು ಕೊಡುವ ಗಿಡದ ಬಾಳು ಸಾರ್ಥಕವಾಗುತ್ತದೆ. ನೋಡಿದೆಯಾ, ಒಂದೇ ಅಂಗಳದ ಗಿಡಗಳಾದರೂ ಒಂದು ಉಪಯೋಗವಾಗುವ ರೀತಿಯಲ್ಲಿ ಬಾಳಿ ಬದುಕುತ್ತದೆ, ಇನ್ನೊಂದು ಕಸವಾಗಿ ಹೋಗುತ್ತದೆ." ಮಗಳು ತಾಯಿಯ ಮಾತನ್ನು ಬೆರಗಿನಿಂದ ಕೇಳುತ್ತಿದ್ದಳು.

ಅಲ್ಲಿ ಕುಳಿತು ಸಂಭಾಷಣೆಯನ್ನು ಆಲಿಸುತ್ತಿದ್ದ ವಿಧವೆಯ ಮಗನಿಗೆ ಎಲ್ಲೋ ಸ್ವಲ್ಪ ಇದ್ದ ಬುದ್ಧಿ ಎಚ್ಚರಗೊಂಡಿತು. ತಾನು ಮಾಡುತ್ತಿದ್ದ ತಪ್ಪು ಏನು ಎಂದು ಈ ರೀತಿಯಾಗಿ ಅರಿತುಕೊಂಡನು: "ಒಂದೇ ಅಂಗಳದಲ್ಲಿ ಬೆಳೆದ ಹೂವು ಬಿಡುವ ಗಿಡದಲ್ಲಿ ಅರಳಿದ ಹೂವುಗಳು ದೇವರ ಪೂಜೆಗಾಗಿ ಉಪಯೋಗಕ್ಕೆ ಬಂದವು. ಹೂವು ಕೊಡದ ಗಿಡ ಬೆಳೆದರೂ ಅದು ಬರೀ ಗೊಬ್ಬರಕ್ಕೆ ಮಾತ್ರ ಉಪಯೋಗವಾಯಿತು. ಅದರಂತೆ ನನ್ನ ಬಾಳೂ ಕೂಡ ವ್ಯರ್ಥವಾಗುವುದು" ಎಂದು ನಿರ್ಧರಿಸಿದನು. ಆ ಕೂಡಲೆ ಮನೆಗೆ ಹೊರಟು, ತಾಯಿಯ ಹತ್ತಿರ ಕ್ಷಮೆಯನ್ನು ಕೇಳಿದನು; ಶಾಲೆಗೆ ತಪ್ಪದೆ ಹೋಗಿ ಗುರುಗಳಿಗೆ ವಿಧೇಯನಾಗಿ ನಡೆದುಕೊಂಡು ಒಳ್ಳೆಯವನಾಗುವೆನೆಂದು ವಚನ ನೀಡಿದನು. ಈ ರೀತಿಯಾಗಿ ಆ ಹುಡುಗನು ತನ್ನ ತಪ್ಪನ್ನು ಹೂವುಗಳ ಮೂಲಕ ಅರ್ಥ ಮಾಡಿಕೊಂಡು ತನ್ನ ಜೀವನವನ್ನೇ ಮಾರ್ಪಾಟು ಮಾಡಿಕೊಂಡನು. ಮಕ್ಕಳೇ, ನಾವು ಸಮಾಜಕ್ಕಾಗಿ, ದೇಶಕ್ಕಾಗಿ ಉಪಯೋಗ ಬರುವಂತಹ ಬಾಳನ್ನು ಬಾಳಬೇಕು. ಅದೇ ಒಳ್ಳೆಯ ಜೀವನ.

## ಮಕ್ಕಳ ಮಂಟಪ

# ಬಲಕ್ಕಿಂತ ಗುಣ ಹಿರಿದು

**ಕಾ**ಶೀರಾಜ್ಯದಲ್ಲಿ ಸುಗುಣ ಎಂಬ ರಾಜನಿದ್ದ. ಅವನು ತನ್ನ ಪ್ರಜೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಪ್ರಜೆಗಳನ್ನು ಮಕ್ಕಳೆಂದು ಭಾವಿಸಿದ್ದ. ಆದ್ದರಿಂದ ಎಲ್ಲರೂ ಅವನನ್ನು ಹೊಗಳುತ್ತಿದ್ದರು. ಪಕ್ಕದ ವಂಗದೇಶದ ರಾಜ ಸುಮಿತ್ರನಿಗೆ ಇದರಿಂದ ಹೊಟ್ಟೆಕಿಚ್ಚು ಉಂಟಾಯಿತು. ಅವನು ಬಲಶಾಲಿ. ತನ್ನ ಹಿರಿಮೆಯನ್ನು ತೋರಿಸಬೇಕು. ಕಾಶೀರಾಜನಿಗಿಂತಲೂ ಹೆಚ್ಚಿಗೆ ಕೀರ್ತಿ ಪಡೆಯಬೇಕು ಎಂದು ಆಲೋಚಿಸಿದ. ಒಮ್ಮೆ ತನ್ನ ಮಿತ್ರ ರಾಜರ ಸಹಾಯ ಪಡೆದು ಅನಿರೀಕ್ಷಿತವಾಗಿ ದಾಳಿ ಮಾಡಿ, ಕಾಶೀರಾಜ್ಯವನ್ನು ವಶಕ್ಕೆ ತೆಗೆದುಕೊಂಡ. ರಾಜ ಸುಗುಣ ತಲೆ ತಪ್ಪಿಸಿಕೊಂಡು ಹೋದ. ಈಗ ಸುಮಿತ್ರನ ಆಳ್ವಿಕೆಯಲ್ಲೂ ಜನರು ಸುಗುಣನನ್ನು ನೆನೆಸಿಕೊಂಡು ಕಣ್ಣೀರು ಹರಿಸುತ್ತಿದ್ದರು. ಇದರಿಂದ ಸುಮಿತ್ರನಿಗೆ ಎಲ್ಲಿಲ್ಲದ ಕೋಪ. ಕಾಶೀರಾಜನನ್ನು ಹಿಡಿದು ತಂದುಕೊಟ್ಟವರಿಗೆ ಒಂದು ಲಕ್ಷ ಚಿನ್ನದ ನಾಣ್ಯಗಳನ್ನು ಕೊಡಲಾಗುವುದು ಎಂದು ಘೋಷಿಸಿದ. ಅವನನ್ನು ಕೊಂದುಬಿಡಬೇಕೆಂದು ಉಪಾಯ ಮಾಡಿದ್ದ.



ಕಾಡಿನಲ್ಲಿ ಒಬ್ಬ ಹರಿದ ಬಟ್ಟೆ, ಕುರುಚಲು ಗಡ್ಡ, ಕೆದರಿದ ಕೂದಲುಳ್ಳವನು ಸುತ್ತಾಡುತ್ತಿದ್ದ. ಅವನ ಹತ್ತಿರಕ್ಕೆ ಒಬ್ಬ ಅಪರಿಚಿತ, ಬಹಳ ಕಷ್ಟದಿಂದ ನಡೆದುಕೊಂಡು ಬಂದು ಬಿದ್ದೇ ಬಿಟ್ಟ. ಕೊಳಕಾಗಿದ್ದವನು ಅವನಿಗೆ ನೀರು ಕುಡಿಸಿ, ಉಪಚಾರ ಮಾಡಿದ, ಅವನಿಗೆ ಜ್ಞಾನ ಬಂದ ಮೇಲೆ, "ಯಾರಪ್ಪಾ, ನೀನು?" ಎಂದು ಕೇಳಿದ. ಆಗ ಆ ಅಪರಿಚಿತ ಹೇಳಿದ, "ವಂಗರಾಜ ಸುಮಿತ್ರ, ಕಾಶೀರಾಜ ಸುಗುಣನನ್ನು ಹಿಡಿದು ತಂದವರಿಗೆ ಒಂದು ಲಕ್ಷ ಚಿನ್ನದ ನಾಣ್ಯಗಳನ್ನು ಕೊಡುವುದಾಗಿ ಘೋಷಿಸಿದ್ದಾನೆ. ನಾನು ಬಡತನದಿಂದ ಬೇಯುತ್ತಿದ್ದೇನೆ. ಕಾಶೀರಾಜನನ್ನು ಹಿಡಿದುಕೊಟ್ಟರೆ, ಹಣ ಸಿಗುವುದೆಂದು ಅವನನ್ನು ಹುಡುಕುತ್ತಿದ್ದೇನೆ. ನೀನು ಅವನನ್ನು ಈ ಕಾಡಿನಲ್ಲಿ ಕಂಡೆಯಾ? ನಾನು ಮತ್ತೆ ಕಾಶೀರಾಜ್ಯಕ್ಕೆ ಹೋಗಬೇಕು" ಎಂದ. ಕೊಳಕಾಗಿದ್ದ ಆ ವ್ಯಕ್ತಿ, ಅವನಿಗೆ ಕಾಶೀರಾಜ್ಯದ ಹಾದಿಯನ್ನು ತೋರಿಸುವೆನೆಂದು ಹೇಳಿ, ಅವನೊಡನೆ ನಡೆದು ನೇರವಾಗಿ ರಾಜನ ಅರಮನೆಗೇ ಬಂದುಬಿಟ್ಟ. ರಾಜನ ಬಳಿ ಹೋಗಿ ಇಬ್ಬರೂ ನಿಂತರು. ಆಗ ಕೊಳಕನು ರಾಜ ಸುಮಿತ್ರನಿಗೆ ತಾನೇ ತಪ್ಪಿಸಿಕೊಂಡ ಕಾಶೀರಾಜ ಸುಗುಣನೆಂದು ಹೇಳಿ ಒಪ್ಪಿಕೊಂಡ. ತನ್ನ ಜೊತೆಯಲ್ಲಿದ್ದ ಬಡವನಿಗೆ ಒಂದು ಲಕ್ಷ ನಾಣ್ಯಗಳನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡ. ಆಗ ವಂಗರಾಜನಿಗೆ ಕಾಶೀರಾಜನ ಒಳ್ಳೆಯ ಗುಣದ ಅರಿವಾಯಿತು; ಪ್ರಜೆಗಳಿಗಾಗಿ ತನ್ನ ಪ್ರಾಣವನ್ನೂ ಲೆಕ್ಕಿಸದೇ ಇರುವುದರಿಂದಲೇ ಪ್ರಜೆಗಳೂ ಕೂಡ ಇವನಿಗಾಗಿ ಹಂಬಲಿಸುತ್ತಾರೆ ಎಂದು ಗೊತ್ತಾಯಿತು. ಅವನು ಕಾಶೀರಾಜನನ್ನು ಗಾಢವಾಗಿ ಆಲಂಗಿಸಿಕೊಂಡು, "**ನಿಜವಾಗಿ ಸೋತವನು ನಾನೇ, ನೀನಲ್ಲ. ನಿನ್ನ ಗುಣಗಳ ಮುಂದೆ ನನ್ನ ಪರಾಕ್ರಮ ಸೋತುಹೋಯಿತು**" ಎಂದು ಹೇಳಿ, ಅವನ ರಾಜ್ಯವನ್ನು ಹಿಂತಿರುಗಿಸಿದ. ಅಂದಿನಿಂದ ಇಬ್ಬರೂ ಸ್ನೇಹಿತರಾದರು.

ನೋಡಿದಿರಾ ಮಕ್ಕಳೆ. ದೇಹ ಬಲಕ್ಕಿಂತ ಮನಸ್ಸಿನ ಒಳ್ಳೆಯ ಗುಣ ಮುಖ್ಯ, ಅಲ್ಲವೇ?